ವಿಭಜಿಸಿ ಕರಾವಳಿ ಭಾಗಕ್ಕೆ ಮತ್ತು ಘಟ್ಟದ ಮೇಲಿನ ಭಾಗಕ್ಕೆ ಪ್ರತ್ಯೇಕವಾಗಿ 2 ಜಿಲ್ಲೆ ಮಾಡುವ ಬಗ್ಗೆ ಸರ್ಕಾರ ಮನಗಂಡಿದೆಯೇ:

ಆ) ಹಾಗಿದ್ದಲ್ಲಿ, ಈ ಕುರಿತು ಏನು ಕ್ರಮ ಕೈಗೊಂಡಿದೆ:

ಇ) ಪ್ರತ್ಯೇಕವಾಗಿ 2 ಜಿಲ್ಲೆಯನ್ನಾಗಿ ಯಾವಾಗ ರಚನೆ ಮಾಡಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಭಟ್ಕಳ ವಿಧಾನ ಸಭಾ ಕ್ಷೇತ್ರದಲ್ಲಿ ಸಾಮಾಜಿಕ ಭದ್ರತೆ ಯೋಜನೆಯಡಿ ಶೀಘ್ರ ಪರಿಹಾರ

2481 (3229) : ಶ್ರೀ ನಾಯಕ್ ಜೆ.ಡಿ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಸಾಮಾಜಿಕ ಭದ್ರತೆ ಯೋಜನೆಯಡಿ ಹಣ ಪಾವತಿ ಆಗಲು ಎಷ್ಟು ಅರ್ಜಿಗಳು ಬಾಕಿ ಇವೆ; (ವಿವರ ಕೊಡುವುದು)

ಆ) ಸದರಿ ಯೋಜನೆಯಡಿ ಹಣ ಪಾವತಿ ಆಗಲು ವಿಳಂಬಕ್ಕೆ ಕಾರಣಗಳೇನು;

ಇ) ಸದರಿ ಯೋಜನೆಯಡಿ ಹಣ ಶೀಘ್ರ ಪಾವತಿ ಮಾಡಲು ಸರಕಾರದವರು ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಸಾಮಾಜಿಕ ಭದ್ರತೆ ಯೋಜನೆಯಡಿ ಹಣ ಪಾವತಿ ಆಗಲು ಭಟ್ಕಳ ತಾಲ್ಲೂಕಿನಲ್ಲಿ 350 ಅರ್ಜಿಗಳು ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ 177 ಅರ್ಜಿಗಳು ಬಾಕಿ ಇವೆ.

ಆ) ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆಯಡಿ ಈಗ ಬಾಕಿ ಇರುವ 527 ಅರ್ಜಿಗಳಿಗೆ ರೂ. 52.70 ಲಕ್ಷಗಳ ಅವಶ್ಯಕತೆ ಇರುತ್ತದೆ. ಈಗ ರೂ. 20.84 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಜಿಲ್ಲಾಧಿಕಾರಿಗಳಿಗೆ ಮರು ಹಂಚಿಕೆ ಮಾಡಲಾಗುತ್ತದೆ.

ಇ) ಅನುದಾನದ ಬಿಡುಗಡೆಗಾಗಿ ಕೇಂದ್ರ ಸರ್ಕಾರವನ್ನು ಸಂಪರ್ಕಿಸಲಾಗುತ್ತಿದೆ.

ಭಟ್ಕಳದಲ್ಲಿ ಛಾಪಾ ಕಾಗದದ ಬದಲಿ ವ್ಯವಸ್ಥೆ

2482 (3230) : ಶ್ರೀ ನಾಯಕ್ ಜೆ.ಡಿ. (ಭಟ್ಕಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಛಾಪಾ ಕಾಗದ ಬಳಕೆ ರದ್ದು ಮಾಡಿರುವುದರಿಂದ ಭಟ್ಕಳ ತಾಲ್ಲೂಕಿಗೆ ಬದಲಿ ವ್ಯವಸ್ಥೆಯ ಸೌಲಭ್ಯ ದೊರಕದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಭಟ್ಕಳದಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆ ಇಲ್ಲದಿರುವುದರಿಂದ ಭಟ್ಕಳದ ಜನರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;